ಸಿ.ಸಿ .ನಂ.132/2023 ಪಿಡಬ್ಲೂಃ 1

ದಿನಾಂಕಃ 13-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಿ ಎಸ್ ಹೆಚ್ ವಕೀಲರಿಂದಃ**

3. ಈ ಪ್ರಕರಣದಲ್ಲಿ ನಮ್ಮ ಸಂಸ್ಥೆಯನ್ನು ಪ್ರತಿನಿಧಿಸಲು ಒಟ್ಟೂ ಎಷ್ಟು ಜನ ಮ್ಯಾನೇಜರ್ ಬಂದು ಹೋಗಿದ್ದಾರೆ ಎಂದರೆ ಸಾಕ್ಷಿ ನಾನು ಬರುವ ಪೂರ್ವದಲ್ಲಿ ರೋಹಿತ್ ಮೋಗೇರ ರವರು ವ್ಯವಸ್ಥಾಪಕರಾಗಿದ್ದರು ಎಂದು ನುಡಿದಿರುತ್ತಾರೆ. ನನ್ನ ಸಂಸ್ಥೆಯನ್ನು ವ್ಯವಸ್ಥಾಪಕರಾದ ರೋಹಿತ್ ಹಾಗೂ ನನ್ನನ್ನು ಹೊರತು ಪಡಿಸಿ ಬೇರೆ ಯಾರು ಪ್ರತಿನಿಧಿಸಿಲ್ಲ ಎಂದರೆ ಸರಿ . ನನ್ನನ್ನು ಹಾಗೂ ರೋಹಿತ್ ಮೋಗೇರ ರವರನ್ನು ಹೊರತು ಪಡಿಸಿ ಈ ಪ್ರಕರಣದಲ್ಲಿ ಬೇರೆ ಯಾರಿಗೂ ಕಾನೂನುಬದ್ಧ ಅನುಮತಿ ಇರಲಿಲ್ಲ ಎಂದರೆ ಸಾಕ್ಷಿ ಮೊದಲಿನ ವ್ಯವಸ್ಥಾಪಕರು ರೋಹಿತ ಮೋಗೇರ ಪ್ರಕರಣವನ್ನು ನೋಡಿಕೊಳ್ಳುತ್ತಿದ್ದರು . ಅವರು ವರ್ಗಾವಣೆ ಹೋಂದಿದ ನಂತರ ನಾನು ಪ್ರಕರಣವನ್ನು ನೋಡಿಕೊಳ್ಳುತ್ತಿದ್ದೇನೆ. ನಮ್ಮಿಬ್ಬರ ಪೂರ್ವದಲ್ಲಿ ಬೇರೆ ಯಾರಿಗೂ ಕಾನೂನುಬದ್ಧ ಅನುಮತಿ ಇರಲಿಲ್ಲ.

4. ಈ ಪ್ರಕರಣದಲ್ಲಿ ಮುಖ್ಯ ಸಾಲಗಾರರ ಹೆಸರು ಸುನೀಲ ಗಣಪತಿ ನಾಯ್ಕ . ವಸೂಲಾತಿಗೆ ಸಂಬಂಧಪಟ್ಟಂತೆ ಅವರಿಗೆ ಪೋನ್ ಮಾಡಿರುತ್ತೇವೆ , ನೋಟಿಸನ್ನು ಕೊಟ್ಟಿರುತ್ತೇವೆ ಮತ್ತು ವಸೂಲಾತಿಗೆ ಮನೆಗೆ ಭೇಟಿ ಮಾಡಿರುತ್ತೇವೆ. ಇದಕ್ಕೆ ಸಂಬಂಧಪಟ್ಟಂತೆ ಎವಿನ್ ಪ್ರಕರಣ ಮಾಡಿದ್ದಾರೆಯೋ ಇಲ್ಲವೋ ನೆನಪಿಲ್ಲ. ಈ ದಿನ ನ್ಯಾಯಾಲಯಕ್ಕೆ ಬರುವಾಗ ಸಾಲದ ಕಡತವನ್ನು ನೋಡಿಕೊಂಡು ಬಂದಿರುತ್ತೇನೆ . ಅದರಲ್ಲಿ ಪಂಚಾಯತ್ ದಾವೆಗೆ ಸಂಬಂಧಪಟ್ಟ ದಾಖಲಾತಿ ಕಂಡು ಬಂದಿರುವುದಿಲ್ಲ. ಮುಖ್ಯ ಸಾಲಗಾರರ ವಿರುದ್ಧ ಚೆಕ್ ಬೋನ್ಸ ಕೇಸ್ ಹಾಕಿಲ್ಲ . ನೈತಿಕವಾಗಿ ಮುಖ್ಯ ಸಾಲಗಾರ ಹಣ ಕೊಡದೇ ಇದ್ದಾಗ ಜಾಮೀನುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರೆ ಸರಿ . ಮುಖ್ಯ ಸಾಲಗಾರನ ವಿರುದ್ಧ ಏನೇನು ಕ್ರಮ ಕೈಗೊಂಡಿದ್ದೇವೆ ನೋಟಿಸಿನಲ್ಲಾಗಲೀ, ಫಿರ್ಯಾದಿನಲ್ಲಾಗಲೀ ಮುಖ್ಯ ವಿಚಾರಣಾ ಪ್ರಮಾಣ

ಪತ್ರದಲ್ಲಾಗಲೀ ನಮೂದಿಸಿಲ್ಲ ಎಂದರೆ ಸರಿ . ನಾವು ದುರುದ್ದೇಶದಿಂದ ಮುಖ್ಯ ಸಾಲಗಾರರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಪೂರ್ವಗ್ರಹ ಪೀಡಿತರಾಗಿ ಈ ಹೆಣ್ಣು ಮಗಳಾದ ಆರೋಪಿಯ ವಿರುದ್ಧ ಕ್ರಮ ಕೈಗೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-18 ಅಧಿಕಾರ ಪತ್ರದ ಆಧಾರದ ಮೇಲೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ . ನಿಪಿ-18 ರಲ್ಲಿ ನಿರ್ದಿಷ್ಟವಾಗಿ ಈ ಪ್ರಕರಣವನ್ನು ನಡೆಸಲು ಅಧಿಕಾರ ಇದೆ ಎಂದು ನಿರ್ದಿಷ್ಟವಾದ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಎಲ್ಲಾ ಕೇಸುಗಳಲ್ಲಿ ಹಾಜರಾಗಲು ಒಂದೇ ಅಧಿಕಾರ ಪತ್ರ ಕೊಟ್ಟಿದ್ದಾರೆ ಎಂದು ನುಡಿದಿರುತ್ತಾರೆ . ನಮ್ಮ ಸಂಸ್ಥೆ ಯಾವ ಕಾನೂನಿನ ಅಡಿ ನೋಂದಣಿಯಾಗಿದೆ ಎಂದರೆ ಸಾಕ್ಷಿ ಸಹಕಾರಿ ಸೌಹಾರ್ದ ಅಡಿ ನೋಂದಣಿಯಾಗಿದೆ ಎಂದು ನುಡಿದಿರುತ್ತಾರೆ. ಸಹಕಾರಿ ಸೌಹಾರ್ದ ಕಾಯ್ದೆ ಅಡಿ ಲೈಸೆನ್ಸ ಇದೆ . ನಮ್ಮ ಸಂಸ್ಥೆಯನ್ನು ನಡೆಸಿಕೊಂಡು ಹೋಗಲು ಬೈಲಾ ಇದೆ . ನಮ್ಮ ಸಂಸ್ಥೆಯಲ್ಲಿ ಒಟ್ಟೂ 12 ಜನ ನಿರ್ದೇಶಕರಿದ್ದಾರೆ. ಸಂಸ್ಥೆ ನಡೆಸಲು ಮ್ಯಾನೇಜಿಂಗ್ ಡೈರೆಕ್ಟರ ಇರುತ್ತಾರೆ ಎಂದರೆ ಸರಿ. ನಮ್ಮಲ್ಲಿ ಠರಾವು ಬುಕ್ ಇದೆ ಎಂದರೆ ಸರಿ . ಈ ರೀತಿ ಪ್ರಕರಣ ಪ್ರತಿನಿಧಿಸಲು ಬೈಲಾ ಪ್ರಕರಣ ರೆಝ್ಯೂಲೇಶನ್ ಠರಾವು ಮಾಡಬೇಕಾಗುತ್ತದೆ ಎಂದರೆ ಸರಿ . ಇದಕ್ಕೆ ಸಂಬಂಧಪಟ್ಟಂತೆ ಯಾವ ದಿನಾಂಕದಂದು ನಿರ್ದಿಷ್ಟವಾಗಿ ನಮ್ಮ ಠರಾವು ಬುಕ್ ನಲ್ಲಿ ನನ್ನನ್ನು ಪ್ರತಿನಿಧಿಸಿದ ಬಗ್ಗೆ ನಮೂದಿದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ . ನಿಪಿ-18 ರಲ್ಲಿ ರೆಝ್ಯೂಲೇಶನ್ ನಂಬರ ಹಾಗೂ ಇಂತಹ ತಾರೀಖನಂದು ರೆಝ್ಯೂಲೇಶನ್ ಆಗಿದೆ ಎಂದು ನಮೂದು ಇಲ್ಲ ಎಂದರೆ ಸರಿ . ನಾನು ಈ ಪ್ರಕರಣದಲ್ಲಿ ಪ್ರಕರಣ ನಡೆಸಲು ಕಾನೂನಿಗೆ ವಿರುದ್ಧವಾಗಿ ಬಂದಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾವು ತೆಗೆದುಕೊಂಡಿರುವ ಕ್ರಮಗಳು ಬೈಲಾಕ್ಕೆ ವಿರುದ್ಧವಾಗಿದ್ದು ಹಾಗೂ ಪ್ರಕರಣ ನಡೆಸಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ . ಅಧಿಕಾರ ಇದೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

ಪಿಡಬ್ಲೂಃ 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.